ಮಾಡಿರುವಂತಹ ರಸ್ತೆಯ ಬಗ್ಗೆ ಅದು ನನ್ನ ಶಿರಾ via ಮಧುಗಿರಿಯವರೆಗೂ ಕೂಡ ಸೇರುತ್ತದೆ. ಅದು ಮೂರು ಪ್ಯಾಕೇಜಾಗಿದೆ. ಅವರು ಹೇಳುತ್ತಿರುವುದು ವಾಸ್ತವಿಕವಾಗಿ ಸತ್ಯ ಇದೆ. ತಾವು ಹೇಳಿರುವುದನ್ನು ನಾನು ಒಪ್ಪಿಕೊಂಡಿದ್ದೇನೆ. ಮಾನ್ಯ ಶಿವಲಿಂಗೇಗೌಡರೆ, ನಿನ್ನೆ ದಿವಸ ಮಾತನಾಡಿದ್ದೇನೆ. ಆ ರಸ್ತೆಗಳು ಅರ್ಧಂಬರ್ಧ ಆಗಿಹೋಗಿದೆ. ಅದು ರಾಷ್ಟ್ರೀಯ ಹೆದ್ದಾರಿಯಾಗಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇದು ರಾಷ್ಟ್ರೀಯ ಹೆದ್ದಾರಿಯಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಇದು, ಅದು ಅಲ್ಲ ಸರ್. ಅದು ಟೋಲ್ ಕಲೆಕ್ಟ್ ಮಾಡಿ ಮಾಡುತ್ತಿರುವಂತಹ ರಸ್ತೆಯಾಗಿದೆ. ಅಲ್ಲಿ ಗಣಿ ಲಾರಿಗಳು ಓಡಾಡುತ್ತಿದ್ದವಲ್ಲಾ ಅದಕ್ಕಾಗಿ ಅಲ್ಲಿ ಟೋಲ್ ಕಲೆಕ್ಟ್ ಮಾಡುತ್ತಿದ್ದರು.

ಶ್ರೀ ಟಿ.ಬಿ.ಜಯಚಂದ್ರ: ಇದಕ್ಕೆ ನಾನು ಉತ್ತರವನ್ನು ಕೊಡಿಸಿಕೊಡುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಈ ಬಗ್ಗೆ PWD ಮಂತ್ರಿಗಳಿಂದ ಉತ್ತರವನ್ನು ಕೊಡಿಸಬೇಕು.

ಶ್ರೀ ಟಿ.ಬಿ.ಜಯಚಂದ್ರ : ಅವರಿಂದಲೇ ಕೊಡಿಸುತ್ತೇನೆ.

ಅಧ್ಯಕ್ಷರು : ಆಯಿತು.

13) ವಿಷಯ : ಯೋಧನ ಕುಟುಂಬಕ್ಕೆ ಪರಿಹಾರ ಧನವನ್ನು ಕೊಡುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಇವತ್ತು ಈ ದೇಶದಲ್ಲಿ ಸೈನಿಕರು ಜಮ್ಮು ಮತ್ತು ಕಾಶ್ಮೀರದ ಗಡಿಭಾಗದಲ್ಲಿ ನಮ್ಮ ಜಿಲ್ಲೆಯವರು ಚನ್ನರಾಯಪಟ್ಟಣ ತಾಲ್ಲೂಕು ಅಗ್ರಹಾರಕ್ಕೆ ಬರುವಂತಹ ಒಬ್ಬ ಯೋಧ ಶ್ರೀ ಯೋಗಾನಂದ ಎಂಬ ಸೈನಿಕನು ಅಲ್ಲಿ ಮೈನಸ್ 25 ಡಿಗ್ರಿ ಚಳಿಯನ್ನು ತಡೆಯುವುದಕ್ಕೆ ಆಗದೇ ಅಸು ನೀಗಿದ್ದಾನೆ. ಅವನು ಸುಮಾರು 5–6 ಕಡೆಗಳಲ್ಲಿ ನಾಸಿಕ್, ಜಮ್ಮುನಲ್ಲಿ, ಕಾಶ್ಮೀರದಲ್ಲಿ, ಸೈನಿಕನಾಗಿ ಸುಮಾರು 18 ವರ್ಷಗಳ ಕಾಲ ಸೇವೆಯನ್ನು ಮಾಡಿದ್ದಾನೆ. ಈಗ ಅವನಿಗೆ ರಾಜ್ಯ ಸರ್ಕಾರದಿಂದ ಒಂದು ಲಕ್ಷ ರೂಪಾಯಿಯನ್ನು ಕೊಡಬೇಕು. ಯಾರೋ ಒಬ್ಬ ಯೋಧನು ಸತ್ತುಹೋದರೆ ಆತನ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಇವತ್ತೂ ಸಹ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಇನ್ನೊಬ್ಬ ಯೋಧ ಮಾಜಿ ಪ್ರಧಾನ ಮಂತ್ರಿ ಊರಿನಲ್ಲಿ ಸತ್ತು

ಹೋಗಿ 6 ತಿಂಗಳಾಯಿತು. ಅವನಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಸರ್ಕಾರಕ್ಕೆ ಕಳುಹಿಸಿಕೊಟ್ಟು ಇವತ್ತಿನವರೆಗೂ ದುಡ್ಡನ್ನು ಕೊಡುವುದಕ್ಕಾಗಲಿಲ್ಲ. ಆತನ ಹೆಸರು ಕಾಂತರಾಜು ಎಂದು ಅವನು ಹರಪನಹಳ್ಳಿ ಗ್ರಾಮ ಹಳೇ ಕೋಟೆ ಹೋಬಳಿ ಹೊಳೆನರಸೀಪುರ ತಾಲ್ಲೂಕು ಆಗಿದೆ. ಅವರು ಸಾಲಸೋಲವನ್ನು ಮಾಡಿ ತಿಥಿ ಮಾಡಿದ್ದಾರೆ. ಇಲ್ಲಿ ಇವತ್ತು ಶವಸಂಸ್ಕಾರ ಮಾಡಬೇಕು. ನಾನು ಎಂ.ಎಲ್.ಎ. ಆಗಿ ಬೆಳಿಗ್ಗೆ ಹೋಗಿದ್ದೆ. ಜಿಲ್ಲಾಧಿಕಾರಿಯವರು ಅಲ್ಲಿಗೆ ಹೊಗಿ ಒಂದು ಚೆಕ್ ಕೊಡುವುದಕ್ಕೆ ಏನು ತೊಂದರೆ, ಸ್ವಾಮಿ? ದಯಮಾಡಿ ಮಾನ್ಯ ಮುಖ್ಯಮಂತ್ರಿಗಳೇ ತಾವು ಹಣಕಾಸಿನ ಸಚಿವರಾಗಿದ್ದೀರಿ. ಇದು ನನ್ನ ಜಿಲ್ಲೆಗೆ ಒಂದಂತಲ್ಲಾ ಇಡೀ ರಾಜ್ಯದಲ್ಲಿ ಜಿಲ್ಲೆಗಳಲ್ಲಿ ಒಂದು 10 ಲಕ್ಷರೂಪಾಯಿಗಳಂತೆ ಅಡ್ವಾನ್ಸ್ ಹಣವನ್ನು ಹಾಕಬೇಕು. ಇದಕ್ಕಾಗಿ ಹಣವಿಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸಭಾನಾಯಕರೆ, ಇವತ್ತು ಬೆಳಿಗ್ಗೆಯೊಳಗಡೆ ಚೆಕ್ ಅನ್ನು ಕೊಡಿಸಬೇಕು. ಆ ಕುಟುಂಬಕ್ಕೆ ಒಂದು ಸೈಟ್ ಅನ್ನು ಕೊಟ್ಟು ಒಂದು ಸರ್ಕಾರಿ ನೌಕರಿಯನ್ನು ಕೊಡುವ ಬಗ್ಗೆ ಉದಾಹರಣೆಗಳು ಇವೆ. ಅದನ್ನು ಮಾಡಿಕೊಡಬೇಕೆಂದು ಸಭಾನಾಯಕರಲ್ಲಿ ಈ ಎರಡು ಕೇಸಿನ ಬಗ್ಗೆ ಮನವಿ ಮಾಡಿಕೊಳ್ಳುತ್ತೇನೆ. ಹೆಚ್.ಡಿ. ಕಾಂತರಾಜು ಮತ್ತು ನಿನ್ನೆ ದಿನ ತೀರಿಹೋದ ಶ್ರೀ ಯೋಗಾನಂದ ಬಿನ್ ಚಿಕ್ಕೇಗೌಡ ಅವನಿಗೆ 26 ವರ್ಷ, ಎರಡು ಚಿಕ್ಕ ಹೆಣ್ಣು ಮಕ್ಕಳು ಇದೆ. ಎರಡು ಹೆಣ್ಣು ಮಕ್ಕಳೂ ಇದೆ. ಒಂದು 4 ವರ್ಷ, ಇನ್ನೊಂದು 8 ವರ್ಷ. ದಯಮಾಡಿ ಆ ಕುಟುಂಬಕ್ಕೆ ಸರ್ಕಾರಿ ನೌಕರಿಯನ್ನು ಸಹ ಕೊಡಿಸಬೇಕು. ಮತ್ತೆ ಒಂದು ಲಕ್ಷ ರೂಪಾಯಿ ಪರಿಹಾರಧನವನ್ನು ಸಹ ಕೊಡಬೇಕು. ಇದಲ್ಲದೆ ಒಂದು ನಿವೇಶನವನ್ನು ಕೊಡಬೇಕು. ಹೊಟೇಲ್ ಮಾಲೀಕರೆಲ್ಲರೂ ಹೌಸಿಂಗ್ ಬೋರ್ಡಿನಿಂದ ನಿವೇಶನವನ್ನು ತೆಗೆದುಕೊಂಡು ಒಳಗೊಳಗೆ ಮಾರುತ್ತಿದ್ದಾರೆ. ಅದನ್ನು ಮಾಡಿಕೊಡಬೇಕೆಂದು ಸಭಾನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ರೇವಣ್ಣನವರು ಪರಿಹಾರವನ್ನು ಕೊಡುವುದಕ್ಕೆ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಆ ಬಗ್ಗೆ ನಾನು ವಿಚಾರ ಮಾಡಿ ಪರಿಹಾರವನ್ನು ಕೊಡಲೇ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಇವರು ಮತ್ತೆ ಬೇರೆ ವಿಚಾರದ ಬಗ್ಗೆ ಪ್ರಸ್ತಾಪ

ಮಾಡಿದ್ದಾರೆ ಆ ಬಗ್ಗೆ ನಾನು ಪರಿಶೀಲನೆ ಮಾಡಿ ಏನು ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೋ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

14) ವಿಷಯ : ರಾಯಚೂರು ಜಿಲ್ಲೆಯ ಲಿಂಗಸಗೂರಿನಲ್ಲಿ ಮತ್ತು ಮನೆಯಲ್ಲಿ ಸಿಡಿಲು ಬಡಿದು ಒಂದೇ ಕುಟುಂಬದಲ್ಲಿ ಮೂರು-ಮೂರು ಜನ ಸತ್ತಿರುವ ಬಗ್ಗೆ.

(ಗೊಂದಲ)

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇದೇ ವಿಷಯದ ಬಗ್ಗೆ ಶೂನ್ಯ ವೇಳೆಯಲ್ಲಿ ರಾಯಚೂರು ಜಿಲ್ಲೆಯ ಲಿಂಗಸಗೂರಿನಲ್ಲಿ ಮತ್ತು ಮಸ್ಕಿಯಲ್ಲಿ ಸಿಡಿಲು ಬಡಿದು ಒಂದು ಕುಟುಂಬದಲ್ಲಿ ಮೂರು-ಮೂರು ಜನ ಸತ್ತಿದ್ದಾರೆ ಎಂದು ಹೇಳಿದ್ದರು. ಅದರಲ್ಲಿ ವಯಸ್ಸಾಗದೆ ಇರುವವರಿಗೆ 14 ವರ್ಷ ಮತ್ತು ಅದರಿಂದ ಕೆಳಗಡೆ ಇರುವವರಿಗೆ ಕೊಟ್ಟಿಲ್ಲವೆಂದು ಹೇಳಿದ್ದರು. ನಾನು ತಕ್ಷಣ ರಾಯಚೂರು ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ, ಅವರಿಗೂ ಕೂಡ ಭಾರತ ಸರ್ಕಾರದ ರಾಷ್ಟ್ರೀಯ ಭದ್ರತಾ ಯೋಜನೆ ಅಡಿಯಲ್ಲಿ ತಕ್ಷಣ ಹಣ ಬಿಡುಗಡೆ ಮಾಡಿದ್ದೇವೆ. ಮಾನ್ಯ ರೇವಣ್ಣರವರು ಹೇಳಿದ ಬಗ್ಗೆಯೂ ಅಷ್ಟೇ ಅನುಕಂಪದ ಆಧಾರದ ಮೇಲೆ ಹಣ ಬಿಡುಗಡೆ ಮಾಡುತ್ತೇವೆ. ದುಡ್ಡಿಗೇನೂ ಕೊರತೆ ಇಲ್ಲ. ಅದನ್ನು ಬಿಡುಗಡೆ ಮಾಡಿಸಿ ಕೊಡುತ್ತೇವೆ.

15) ವಿಷಯ : ವೈದ್ಯರನ್ನು ನೇಮಿಸುವ ಬಗ್ಗೆ.

ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಇಡೀ ಬಿಜಾಪುರ ಜಿಲ್ಲೆಯಲ್ಲಿ ಖಾಲಿ ಇರತಕ್ಕಂತಹ ವೈದ್ಯರ ಅಂಕಿ ಸಂಖ್ಯೆ ತಮ್ಮಲ್ಲಿರಬಹುದು. ವಿಶೇಷವಾಗಿ ನಮ್ಮ ಬಸವನ ಬಾಗೇವಾಡಿಯಲ್ಲಿ 14 ಜನ ವೈದ್ಯರು ಬೇಕಾಗಿತ್ತು. ಅದರಲ್ಲಿ 11 ಜನ ಇಲ್ಲ. ಉಳಿದಿರತಕ್ಕಂತಹ ಮೂರು ಜನ ಕೂಡ ಒಂದು ದಿವಸ ಬರುತ್ತಾರೆ, ಒಂದು ದಿವಸ ಬರುವುದಿಲ್ಲ. ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ನಿಡಗುಂದಿ ಪ್ರಾಥಮಿಕ ಆರೋಗ್ಯ ಕೇಂದ್ರ ಎಂದು ಇದೆ. ಅಲ್ಲಿ ಐದು ಜನ ವೈದ್ಯರಲ್ಲಿ ಒಬ್ಬರೂ ಇಲ್ಲ. ಹೀಗಾದರೆ ಆಸ್ಪತ್ರೆ ಹೇಗೆ ನಡೆಯಲಿಕ್ಕೆ ಸಾಧ್ಯವಿದೆ ಎಂದು ತಾವು ಸ್ವಲ್ಪ ತಿಳಿಸಬೇಕು. ಜೊತೆಗೆ ವೈದ್ಯಾಧಿಕಾರಿಗಳನ್ನು Posting ಮಾಡುವುದಕ್ಕೆ ತಾವು counseling